# 'ಸುಧಾ' ಜೊತೆಗಿನ ಓದುಗರ ಒಡನಾಟ

### ನಮ್ಮ ಕುಟುಂಬದ ಕೈಪಿಡಿ

'ಸುಧಾ' ನಮ್ಮ ಕುಟುಂಬದ ಅಚ್ಚುಮೆಚ್ಚಿನ ವಾರಪತ್ರಿಕೆ. ನಾನು ಪ್ರಾಥಮಿಕ ಶಾಲೆಯಲ್ಲಿ ಓದುತ್ತಿದ್ದ ಸಮಯದಲ್ಲಿ ಪ್ರಕಟವಾಗುತ್ತಿದ್ದ 'ಚಿತ್ರಮಯ ಜ್ಞಾನಕೋಶ' ಬಹಳ ಉಪಯುಕ್ತ ಮಾಹಿತಿ ಕೊಡುತ್ತಿತ್ತು. ಆದ್ದರಿಂದ ನಮ್ಮ ತಾಯಿ ಅದರ ಎಲ್ಲಾ ಸಂಚಿಕೆ ಸಂಗ್ರಹಿಸಿ ಇಟ್ಟಿದ್ದರು. ಈಗಲೂ ಅದೇ ಹಾದಿಯಲ್ಲಿ ಸಾಗುತ್ತಿದೆ ಪತ್ರಿಕೆ. ಸಾಕಷ್ಟು ಉಪಯುಕ್ತ ಮಾಹಿತಿ, ಬರಹಗಳನ್ನು ನೀಡುತ್ತಿದ್ದೀರಿ. ಲಾಂಗ್ ಲಿವ್ 'ಸುಧಾ'.

—ಅರುಣ್ ಕೆ.ಎನ್., ಬೆಂಗಳೂರು

### ನವನವೋನ್ಮೇಶ 'ಸುಧಾ'

ನನ್ನ ನೆಚ್ಚಿನ 'ಸುಧಾ'ಳಿಗೆ 60 ತುಂಬಿದೆ ಎಂದರೆ ನಂಬಲಾಗುತ್ತಿಲ್ಲ. ಬಾಲ್ಯದಿಂದಲೂ ಆಕೆಯನ್ನು ಕಾಣುತ್ತಾ ಬಂದಿರುವ ನನಗೆ, ಈಗ ಕಾಸಿಗೆ ತಕ್ಕಂತೆ, ಗುಣಮಟ್ಟದಲ್ಲಿ ರಾಜಿ ಮಾಡಿಕೊಳ್ಳದೇ ಪ್ರತಿ ವಾರ ನವನವೀನ ಉಡುಗೆ ತೊಟ್ಟು ಬರುತ್ತಿರುವ ಆಕೆಯನ್ನು ನೋಡಿದಷ್ಟೂ ಸಾಲದೆನಿಸುತ್ತದೆ. 'ಸುಧಾ'ದಿಂದ ಹಲವು ಗಣ್ಯರ ಪರಿಚಯವಾಯಿತು. ಹಲವು ವಿಷಯಗಳನ್ನು ತಿಳಿದುಕೊಳ್ಳುವಂತಾಯಿತು. ಆ ಕಾರಣಕ್ಕಾಗಿಯೇ ಓದುಗರೆಲ್ಲರೂ 'ಸುಧಾ'ಳ ದಾಸರಾಗಿದ್ದೇವೆ.

—ವಿ. ಮಾಧವ ಶಾಂತಮೂರ್ತಿ ಶ್ಯಾನುಭಾಗ, ಕುಂದಾಪುರ

### 40 ವರ್ಷಗಳ ನಂಟು

ನನ್ನ ಮಾತೃಭಾಷೆ ತೆಲುಗು. ಆದರೆ ಕನ್ನಡ ಓದಲು ಬರುವುದರಿಂದ ನಾನು 40 ವರ್ಷಗಳಿಂದಲೂ 'ಸುಧಾ' ಓದುತ್ತಿರುವೆ. 'ಸುಧಾ'ದಲ್ಲಿ ಎಲ್ಲಾ ಅಂಕಣಗಳೂ ಚೆನ್ನಾಗಿ ಮೂಡಿಬರುತ್ತಿವೆ. ಧನ್ಯವಾದಗಳು.

—ಎ.ವಿ. ಲಕ್ಷ್ಮಿ, ನರಗುಂದ

### ನನಗೂ 'ಸುಧಾ' ಹೆಸರಿಟ್ಟರು

ನಾನು ಜನಿಸಿದ್ದು ಡಿಸೆಂಬರ್ ತಿಂಗಳ 1965ರಲ್ಲಿ. ನನಗೆ ಗಾಯಿತ್ರಿ ಎಂದು ನಾಮಕರಣ ಮಾಡಿದ್ದರಂತೆ. 'ಸುಧಾ' ಪತ್ರಿಕೆ ಆಗ ತಾನೇ ಸಾಹಿತ್ಯಲೋಕದಲ್ಲಿ ಕಾಲಿಟ್ಟಿತ್ತು. ನಮ್ಮ ದೊಡ್ಡಪ್ಪ ಹೇಳಿದರಂತೆ, ಇವಳಿಗೆ 'ಸುಧಾ' ಎಂದು ಹೆಸರಿಡೋಣ, 'ಸುಧಾ' ವಾರಪತ್ರಿಕೆ ಬರುತ್ತಿದೆಯಲ್ಲ, ಆ ಹೆಸರು ಚೆನ್ನಾಗಿದೆ ಎಂದು. ನಂತರ ನನಗೆ 'ಸುಧಾ' ಎಂದು ಹೆಸರಿಟ್ಟರು. 80ರ ದಶಕದಲ್ಲಿ ಪ್ರಕಟಗೊಂಡಿದ್ದ 'ಸುಳಿಯ ತಿರುವು', 'ಕೈ ಹಿಡಿದು ನಡೆಸೆನ್ನನು' ಧಾರಾವಾಹಿಗಳು ನನ್ನ ಮೆಚ್ಚಿನವು. 'ಸುಧಾ' ಹೀಗೇ ವಿಶಿಷ್ಟತೆಯ ಸೌರಭ ಸೂಸುತ್ತಿರಲಿ...

—ಡಾ. ಸುಧಾ ವಿ.ಆರ್., ಹಾಸನ

### ಬದುಕಲ್ಲಿ ಹಾಸುಹೊಕ್ಕಾದ 'ಸುಧಾ'

ಮೊಟ್ಟಮೊದಲ 'ಸುಧಾ' ಸಂಚಿಕೆ ನೋಡಿದಾಗಿನ ಸಂಭ್ರಮ ಹಸಿಗೋಡೆಯಲ್ಲಿ ಹರಳೊತ್ತಿದಂತೆ ಮನದಲ್ಲಿ ಅಚ್ಚಳಿಯದೇ ನೆಲೆನಿಂತಿದೆ. ನಾನಾಗ 10 ವರ್ಷದವಳು. ವ್ಯಾಪಾರದೊಂದಿಗೆ ಪೇಪರ್ ಏಜೆನ್ಸಿ ನಡೆಸುತ್ತಿದ್ದ ತಂದೆಯವರು 'ಸುಧಾ' ಬಗ್ಗೆ ಮೊದಲೇ ಹೇಳಿ ಕೌತುಕ ಮೂಡಿಸಿದ್ದರು. ಬೆಳಿಗ್ಗೆ 9.30 ಬಸ್ಸಿಗೆ ಬರುವ ಪೇಪರ್ ಬಂಡಲ್ ಬಿಚ್ಚುತ್ತಿದ್ದಂತೆಯೇ 'ಸುಧಾ' ನೋಡಲು ತುದಿಗಾಲಲ್ಲಿ ನಿಂತಿದ್ದೆ. ಅಮೃತದ ಕಳಸ ಹಿಡಿದ ಮೋಹಿನಿಯ ಚಿತ್ರ ಮನದ ಪರದೆ ಮೇಲೆ ಶಾಶ್ವತವಾಗಿ ಪಡಿಮೂಡಿತು.

'ಸು' ಎಂದರೆ ಒಳ್ಳೆಯದನ್ನು 'ಧಾ' ಎಂದರೆ ನೀಡುವವಳು ಎಂದು ಅಪ್ಪ ಅರ್ಥ ಹೇಳಿದ್ದರು. ಅದೇ ಹೆಸರಿನ ತಂಗಿಯಿದ್ದರೂ ಅರ್ಥ ಮಾತ್ರ ಆಗಲೇ ತಿಳಿದದ್ದು. ಆಗಿನ 'ಬಾಲವನ' ಸದಸ್ಯತ್ವ ಪಡೆದವರಿಗೆ ಒಂದು ಸಂಖ್ಯೆ ಕೊಡುತ್ತಿದ್ದು, ನಾನೂ ಪಡೆದಿದ್ದೆ. ಹೀಗೆ 'ಸುಧಾ' ಬದುಕಲ್ಲಿ ಹಾಸುಹೊಕ್ಕಾಗಿಬಿಟ್ಟಿದ್ದಾಳೆ. ಆಗಿನ ಕೆಲವು 'ಸುಧಾ' ಕಥೆಗಳ ಸಂಗ್ರಹಗಳನ್ನು ಪುಸ್ತಕ ರೂಪವಾಗಿಸಿ ಇಟ್ಟಿದ್ದು ಇಂದಿಗೂ ಇವೆ. ಕಥೆ, ಧಾರಾವಾಹಿ, ಪ್ರಬಂಧ, ಚಿಂತನೆಗೆ ಪ್ರೇರೇಪಿಸುವ ಲೇಖನಗಳು, ಮಹತ್ವಪೂರ್ಣ ಮುಖಪುಟ ಲೇಖನಗಳು ಸ್ಫೂರ್ತಿದಾಯಕ. 'ಸುಧಾ' ಸಾಂಗತ್ಯ 'ಸಜ್ಜನರ ಸಂಗವದು ಹೆಜ್ಜೇನ ಸವಿದಂತೆ' ಎಂಬಂತಹುದು.

ನನ್ನ ಹಲವಾರು ಲೇಖನಗಳು ಇಪ್ಪತ್ತು ವರ್ಷಗಳಿಗೂ ಹಿಂದಿನಿಂದಲೂ ಆಗಾಗ ಪ್ರಕಟವಾದವೆಂಬುದು ನನಗೆ ಬರವಣಿಗೆಗೆ ಪ್ರೇರೇಪಣೆ, ಹೆಮ್ಮೆಯ ಸಂಗತಿ. ಪ್ರಾರಂಭವಾದಂದಿನಿಂದ ಇಂದಿನವರೆಗೂ ಪ್ರಗತಿಗಾಮಿ ವಿಚಾರಗಳತ್ತಲೇ ಮೊಗಮಾಡಿ ಮುಂದುವರಿದಿರುವ ನೆಚ್ಚಿನ 'ಸುಧಾ' ಯಶಸ್ವಿ ಯಾನ ನಿರಂತರವಾಗಿರಲಿ.

—ಕೆ.ಆರ್. ಉಮಾದೇವಿ ಉರಾಳ, ತೀರ್ಥಹಳ್ಳಿ

### 'ಸುಧಾ' ಅನುಬಂಧ

'ಸುಧಾ' ಜೊತೆಗೆ ನನ್ನದು ಮೂವತ್ತು ವರ್ಷಗಳ ಅನುಬಂಧ. ನನಗೀಗ 80 ವರ್ಷ. ಅಂಚೆ ಇಲಾಖೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತನಾಗಿದ್ದೇನೆ. 'ಸುಧಾ'ದಲ್ಲಿ ನನ್ನ ಕೆಲವು ಬರಹಗಳು, ಅಭಿಪ್ರಾಯಗಳು ಪ್ರಕಟಗೊಂಡಿದ್ದು ನನಗೆ ಸಂತೋಷ ಹಾಗೂ ಹೆಮ್ಮೆಯ ಸಂಗತಿ. 'ಸುಧಾ' ವಜ್ರ ಮಹೋತ್ಸವದ ಸಂದರ್ಭದಲ್ಲಿ ಮುಂದೆ ನೂರಾರು ವರ್ಷ ಬಾಳಿ, ಯಶಸ್ವಿಯಾಗಿ ಮುನ್ನಡೆಯಲೆಂದು ಹಾರೈಸುತ್ತೇನೆ.

—ಬಸಪ್ಪ ಎಸ್. ಮುಳ್ಳೂರ, ಹಲಗತ್ತಿ

### 'ಸುಧಾಭಿಮಾನಿ'

ನನ್ನ ಶಾಲಾ ದಿನಗಳಿಂದಲೂ ನಾನು 'ಸುಧಾಭಿಮಾನಿ'. ಆ ದಿನಗಳಲ್ಲಿ 'ಸುಧಾ' ನಮಗೆ ತಲುಪುತ್ತಿದ್ದುದು ಶುಕ್ರವಾರದಂದು. ಪತ್ರಿಕೆಯ ಎಲ್ಲಾ ಪ್ರಕಾರದ ಲೇಖನಗಳು ಇಷ್ಟವಾಗುತ್ತಿದ್ದವು. ನನ್ನ ಕೆಲವು ಲೇಖನಗಳು, ಪ್ರವಾಸ ಕಥನಗಳು ಪ್ರಕಟವಾಗಿವೆ. 100ರ ಮೈಲಿಗಲ್ಲನ್ನೂ ದಾಟಿ 'ಸುಧಾ' ಮುನ್ನಡೆಯಲಿ.

— ಪ್ರಭಾಪ್ರಸಾದ್

### ಓದಿನ ಗೀಳು ಹತ್ತಿಸಿದ್ದು...

ನನ್ನಲ್ಲಿ ಓದುವ ಗೀಳು ಹಚ್ಚಿಸಿದ್ದೇ 'ಸುಧಾ'. ಆಗ ಕಥೆಗಳನ್ನು (ಅಂದು ಎರಡು ಮೂರು ಕಥೆಗಳು ಪ್ರಕಟಗೊಳ್ಳುತ್ತಿದ್ದವು) ತಪ್ಪದೇ ಓದುತ್ತಿದ್ದೆ. ಒಂದು ಸಾಂಸ್ಕೃತಿಕ ಬೆಳವಣಿಗೆ, ಸಾಹಿತ್ಯಿಕ, ಬರವಣಿಗೆಯ ಹವ್ಯಾಸ ಮೂಡಿಸಿದ್ದು 'ಸುಧಾ'. ಇನ್ನೊಂದು ವಿಶೇಷ ಎಂದರೆ, ನಮ್ಮ ಕುಟುಂಬದವರು, ಸಂಬಂಧಿಗಳೆಲ್ಲ 'ಸುಧಾ ಓದುಗ ಸಂಬಂಧಿಗಳು'.

—ಸಿ.ಕೆ. ಗಣಪ್ಪನವರ ಮುಂಡರಗಿ

### ನಿನ್ನ ಒಡನಾಟ ಹೇಗೆ ಬಿಡಲಿ?

'ಸುಧಾ', ನಿನ್ನೊಡನಾಟ ಹೇಗೆ ಮರೆಯಲಿ? 'ಡಾಬು' ಚಿತ್ರಕಥೆಗಳೊಂದಿಗೆ ಶುರುವಾಗಿ ಕಥೆ, ಧಾರಾವಾಹಿ, ಅಂಕಣ... ಹೀಗೆ ಒಂದೂ ಪುಟ ಬಿಡದೆ ಓದಿ ಸಂರಕ್ಷಿಸಿ, 70ರ ದಶಕದಲ್ಲಿ ಇಂಗ್ಲೆಂಡ್‌ನಲ್ಲಿದ್ದ ಅಕ್ಕನಿಗೆ ಹಡಗಿನಲ್ಲಿ ಕಳುಹಿಸಿ ನಾನು, ನನ್ನ ತಮ್ಮ ಹಿಗ್ಗುತ್ತಿದ್ದ ದಿನಗಳನ್ನು ಮರೆಯಲು ಸಾಧ್ಯವೇ? ಮದುವೆಯಾಗಿ ಸಾಹಿತ್ಯ–ಓದಿನ ಆಸಕ್ತಿ ಇಲ್ಲದ ಕುಟುಂಬಕ್ಕೆ ಸೇರಿದರೂ 'ಸುಧಾ'ಳ ಹಳೆಯ ಸಂಚಿಕೆಗಳನ್ನು ಓದಿ ಆನಂದಪಡುತ್ತಿದ್ದ ದಿನಗಳನ್ನು ಕಂಡು ನನ್ನ ಪತಿ ವಾರವಾರ ಹೊಸ 'ಸುಧಾ'ಳನ್ನು ಕೈಲಿಟ್ಟು ಸಂತಸಪಡಿಸಿದ್ದನ್ನು ಮರೆಯಲು ಸಾಧ್ಯವೇ?

ಈಗ ಮೂರು ಮೊಮ್ಮಕ್ಕಳಿಗೆ ನಿನ್ನಿಂದ ಕಥೆ ಓದಿ ಹೇಳುವಾಗ ಅದೆಷ್ಟು ಸಂತೋಷವಾಗುತ್ತಿದೆ ಗೊತ್ತಾ?

—ನಾಗರತ್ನ ಸತ್ಯನಾರಾಯಣ, ಮೈಸೂರು